# ವಿಶ್ವಬ್ಯಾಂಕ್

ಸಂಪರ್ಕಗಳಿಗಾಗಿ: ದೆಹಲಿಯಲ್ಲಿ: ಗೀತಾಂಜಲಿ ಛೋಪ್ರಾ (91 11) 2461-7241
ಇಮೈಲ್: gchopra@worldbank.org
ವಾಷಿಂಗ್‌ಟನ್‌ನಲ್ಲಿ: ಕರೀನಾ ಮಾನಸೇ (202) 473-1729
ಇ–ಮೈಲ್: kmanasseh@worldbank.org

## ಮಧ್ಯಪ್ರದೇಶದಲ್ಲಿ ಜಲವಲಯ ಪುನರಾರಚನೆಗೆ ವಿಶ್ವಬ್ಯಾಂಕ್ ಬೆಂಬಲ.

### ಈ ಯೋಜನೆಯಿಂದ ಕೇಂದ್ರಿಯ ಭಾರತದ ರಾಜ್ಯಕ್ಕೆ ಲಾಭ

ವಾಷಿಂಗ್ಟನ್, ಸೆಪ್ಟಂಬರ್ ೬, ೨೦೦೪–ಭಾರತದ ಕೇಂದ್ರಭಾಗದಲ್ಲಿರುವ ರಾಜ್ಯವಾದ ಮಧ್ಯಪ್ರದೇಶದಲ್ಲಿ ಜಲ ಉತ್ಪಾದಕತೆಯನ್ನು ನಿರಂತರವಾಗಿ ಪ್ರಗತಿ ಪಡಿಸಲು ಹಾಗೂ ಬಡತನ ನಿವಾರಣೆಗಾಗಿ ವಿಶ್ವ ಬ್ಯಾಂಕು ಇಂದು ೩೯೬ ಮಿಲಿಯ ಡಾಲರುಗಳ ಸಾಲ ಒದಗಿಸಿದೆ.

ಮಧ್ಯಪ್ರದೇಶ ಜಲ ವಲಯ ಪುನರಾಚನೆಯು, ಆಯ್ದ ನದಿಗಳ (ಚಂಬಲ್, ಸಿಂಧಿ, ಬೆಟ್ವಾ, ಕೆನ್ ಹಾಗೂ ಟಾನ್ಸ್) ಮುಖಜ ಭೂಮಿಗಳಲ್ಲಿ ವಾಸಮಾಡುವ ಮಿಲಿಯಗಟ್ಟಲೆ ಜನರಿಗೆ, ನೀರಿನ ಉತ್ಪಾದಕತೆ ವೃದ್ಧಿಸಿ, ಕೃಷಿ ನೀರಾವರಿ ಹೆಚ್ಚುವಂತೆ ಮಾಡಿ ಕೃಷಿ ಹಾಗೂ ಕೃಷಿಯೇತರ ಉದ್ಯೋಗ ಅವಕಾಶಗಳನ್ನು ಸೃಜಿಸಲು ಸಹಾಯಕವಾಗಲಿದೆ.

೬ ಕೋಟಿ ಜನಸಂಖ್ಯೆ ಇರುವ ಮಧ್ಯಪ್ರದೇಶದ ಅರ್ಥವ್ಯವಸ್ಥೆ ಕೃಷಿಯನ್ನೇ ಅವಲಂಬಿಸಿದೆ. ರಾಜ್ಯದ ಒಟ್ಟಾರೆ ಉತ್ಪನ್ನದ ಶೇಕಡ ೩೫ರಷ್ಟು ಕೃಷಿಯಿಂದಲೇ ಬರುತ್ತದೆ. ಒಟ್ಟು ಉದ್ಯೋಗದ ಶೆಕಡ ೭೦ರಷ್ಟು ಮಂದಿ ಕಷಿ ಕ್ಷೇತ್ರದಲ್ಲಿದ್ದಾರೆ. ಜನಸಂಖ್ಯೆಯ ಸುಮಾರು ಮೂರನೇ ಒಂದಂಶ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗದವರು ಸೇರಿದಂತೆ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದವರು. ಬುಡಕಟ್ಟು ಜನಾಂದವರಲ್ಲಿ ಬಡವರ ಅನುಪಾತ ಅಧಿಕವಾಗಿದೆ. ಬಡತನ ಲಿಂಗ ಪ್ರಭೇದದಲ್ಲೂ ಅನ್ವಯಿಸುತ್ತದೆ. ರಾಜ್ಯದಲ್ಲಿ ಬಡತನ ನಿವಾರಣೆ ಹಾಗೂ ಆರ್ಥಿಕ ಪ್ರಗತಿ ಸಾದಿಸುವಲ್ಲಿನ ಪ್ರಮುಖ ಸವಾಲು ಇರುವುದೆಂದರೆ, ಜಲ ಮತ್ತು ಪ್ರಾಕೃತಿಕ ಸಂಪನ್ಮೂಲದ ನಿರ್ವಹಣೆ. ಇದರಲ್ಲಿ ಜನ ಭಾಗವಹಿಸುವಿಕೆ, ಸಾಮಾಜಿಕ ಹಾಗೂ ಲಿಂಗ ಪ್ರಭೇದಗಳ ವಿಷಯಗಳೂ ಒಳಗೊಂಡಿವೆ.

ಮಧ್ಯಪ್ರದೇಶದಲ್ಲಿ ಸಾಂಸ್ಥಿಕ ಸುಧಾರಣೆಗಳ ಮೂಲಕ ಜಲಸಂಪನ್ಮೂಲಗಳ ನಿರ್ವಹಣೆ ಹಾಗೂ ರಾಷ್ಟ್ರೀಯ ಜಲನೀತಿ ಹಾಗೂ ರಾಜ್ಯ ಜಲನೀತಿಗೆ ಅನುಗುಣವಾಗಿ ಸುಧರಿತ ನೀರಾವರಿ ಸೇವಾ ಪೂರೈಕೆಯನ್ನು ಅನುಷ್ಠಾನಗೊಳಿಸಲು ಈ ಸಾಲ ಸಹಾಯಕವಾಗುತ್ತದೆ.

"ಪ್ರಸ್ತುತ, ಬಡತನ ರೇಖೆಗಿಂತ ಕೆಳಗಿನ ಮಟ್ಟದಲ್ಲಿ ಜೀವನ ನಡೆಸುವ ಸುಮಾರು ೫೦೦,೦೦೦ ಜನರಿಗೆ ಪ್ರಯೋಜನ ಒದಗಿಸುವಂತೆ, ಹಾಲಿ ನೀರಾವರಿ ಆಸ್ತಿಪಾಸ್ತಿಗಳ ಆಧುನೀಕರಣ ಹಾಗೂ ಪ್ರಭಾವಕಾರಿಯಾಗಿ ಬಗೆಬಗೆಯ ಕೃಷಿಗಾಗಿ ಬಹು ಪ್ರಮಾಣದ ಬಂಡವಾಳ ತೊಡಗಿಸುವುದು" ಎನ್ನುತ್ತಾರೆ ಶ್ರೀನಿವಾಸನ್ ರಾಜ್ ರಾಜಗೋಪಾಲ್, ವಿಶ್ವಬ್ಯಾಂಕಿನ ಜಲ ಸಂಪನ್ಮೂಲ ವಿಶೇಷಜ್ಞ, "ಈ ಯೋಜನೆಯ ಅನುಷ್ಠಾನದ ಅಂತ್ಯದೊಳಗಾಗಿ ಈ ಜನರು ಬಡತನ ರೇಖೆಗಿಂತ ಮೇಲಿನ ಮಟ್ಟದಲ್ಲಿ ಜೀವನ ನಡೆಸುತ್ತಾರೆಂದು ನಮ್ಮ ನಂಬಿಕೆ" ಎಂದು ಅವರು ತಿಳಿಸಿದ್ದಾರೆ. ಒಟ್ಟಿನಲ್ಲಿ ಸುಮಾರು ೨೦ ಲಕ್ಷ ಜನರಿಗೆ ಈ ಯೋಜನೆಯಿಂದ ಪ್ರಯೋಜವಾಗಲಿದೆ. ಸಿರಿಯಲ್, ಬೇಳೆಕಾಳುಗಳು, ಎಣ್ಣೆ ಬೀಜಗಳು ಹಾಗೂ ತರಕಾರಿ ಹಾಗೂ ಸಾಂಬಾರ ಪದಾರ್ಥಗಳ ಉತ್ಪಾದನೆಯಲ್ಲಿ ಗಣನೀಯ ಪ್ರಮಾಣದ ವೃದ್ಧಿ ಆಗಲಿದೆ ಎಂದು ಅವರು ತಿಳಿಸಿದ್ದಾರೆ.

ಈ ಸಾಲದಿಂದ ಹಣಕಾಸು ನೀಡಲಾಗುವ ಕ್ಷೇತ್ರಗಳೆಂದರೆ : (೧) ಕಾರ್ಯಯೋಜನೆ, ರಾಜ್ಯಮಟ್ಟದಲ್ಲಿ ನಿಯಂತ್ರಕ ಸಂಸ್ಥೆಗಳ ಮತ್ತು ಉಪಕರಣಗಳನ್ನುಸ ಸ್ಥಾಪಿಸುವುದು (೨) ನೀರಾವರಿ ಸೇವೆಗಳನ್ನು, ಕೈಗೆಟಕುವ ಖರ್ಚಿನಲ್ಲಿ, ಆರ್ಥಿಕವಾಗಿ ಬದುಕಬಲ್ಲ ಸಂಸ್ಥೆಗಳಿಗೆ ಒದಗಿಸುವ ಕ್ರಮಗಳು ಹಾಗೂ ಸಾಂಸ್ಥಿಕ ಸುಧಾರಣೆಗಳು (೩) ಪ್ರಸ್ತುತ ಇರುವ ಆಯ್ದ ನೀರಾವರಿ ಮತ್ತು ಚರಂಡಿ ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ೫ ನದಿಗಳ ಮುಖಜ ಭೂಮಿಗಳಲ್ಲಿ ೬೫೪ ದೊಡ್ಡ ಸಣ್ಣ ಯೋಜನೆಗಳ ಮೂಲಕ ೬೨೦,೦೦೦

ಹೆಕ್ಟೇರು ವಿಸ್ತೀರ್ಣದ ಪ್ರದೇಶದಲ್ಲಿ ಆಧುನೀಕರಣ ಮತ್ತ ಪುನರ್ವಸತಿ (ಳ) ಕೃಷಿ ತೀವ್ರತೆ ಹಾಗೂ ಬಗೆಬಗೆಯ ಕೃಷಿ, ತೋಟಗಾರಿಕೆ, ಜಾನುವಾರು ಸಾಕಣಿ, ಮೀನುಗಾರಿಕೆ ಅಭಿವೃದ್ಧಿ ಆಧುನೀಕರಣ (ಱ)ಯೋಜನಾ ಅನುಷ್ಠಾನ ಕಾರ್ಯ ಚಟುವಟಿಕೆಗಳ ಸಂಯೋಜನೆ.

ಪ್ರಸ್ತಾವಿತ ಯೋಜನೆಯು, ವಿಶ್ವಬ್ಯಾಂಕಿನ, ಭಾರತ ಕುರಿತಾದ ಕಂಟ್ರೀ ಸ್ಟ್ರಾಟಜಿಗೆ ಅನುಗುಣವಾಗಿದೆ. ಇದು ನಿರಂತರ ಪ್ರಗತಿ ಹಾಗೂ ಬಡತನ ನಿವಾರಣೆಯುಕ್ತ ಕೇಂದ್ರೀಕೃತವಾಗಿದ್ದು ಜಲವಲಯ ಹಾಗೂ ನೀರಾವರೀ ಉಪ–ವಲಯ ಸುಧಾರಣೆ, ಜನ–ಪೂರಕವಾದ, ನೀರಿನ ಉತ್ಪಾದಕತೆಯ ಅಭಿವೃದ್ಧಿ, ನದಿ ಮುಖಜ ಭೂಮಿಗಳಲ್ಲಿ ಸಮಗ್ರ ಅಭಿವೃದ್ಧಿ ಹಾಗೂ ಗ್ರಾಮೀಣ ಮತ್ತ ನಗರಗಳಲ್ಲಿ ಜೀವನೋಪಅಯ ಪ್ರಗತಿಯ ಕುರಿತಾಗಿದೆ.

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ:

http://www.worldbank.org/indiastrategy.com